## ಎಲ್ಲಿದೆ ಪ್ರಜ್ಞೆ?

‘ಕಸ ಭೂಮಿಯ ನುಂಗಿ...’ (ಏ. 24, ಗುರುರಾಜ್ ಎಸ್. ದಾವಣಗೆರೆ) ಮುಖಪುಟ ಲೇಖನ ಕಸದ ಸಮಸ್ಯೆ ಹಾಗೂ ದಿನೇ ದಿನೇ ಸರ್ವಾಂತರ್ಯಾಮಿಯಾಗಿ ವ್ಯಾಪಿಸುತ್ತಿರುವ ಪ್ಲಾಸ್ಟಿಕ್ ಅಪಾಯಗಳ ಕುರಿತು ಮಾಹಿತಿಪೂರ್ಣವಾಗಿದೆ.




ದುರದೃಷ್ಟವಶಾತ್ ಜನರಿಗೆ ಈ ಬಗ್ಗೆ ಎಷ್ಟೇ ತಿಳಿಹೇಳಿದರೂ ಯಾವುದೇ ಫಲ ನೀಡುತ್ತಿಲ್ಲ. ಕಸದ ಸಮಸ್ಯೆ ಕುರಿತು ಎಷ್ಟೆಲ್ಲಾ ಚರ್ಚೆ ನಡೆದರೂ ಪ್ಲಾಸ್ಟಿಕ್ ಬಳಕೆ, ಅದರ ಬದಲಿ ಮಾರ್ಗದ ಕುರಿತು ಏನೆಲ್ಲಾ ಜಾಗೃತಿ ಮೂಡಿಸಿದರೂ ಕಾರ್ಯರೂಪಕ್ಕೆ ಬರುತ್ತಿಲ್ಲ. ಜನರು ಈ ವಿಷಯದಲ್ಲಿ ಸ್ವಯಂಪ್ರಜ್ಞೆ ಬೆಳೆಸಿಕೊಳ್ಳದೇ ಹೋದರೆ ಮತ್ತಷ್ಟು ವಿಕೋಪಗಳಿಗೆ ತುತ್ತಾಗುವುದು ತಪ್ಪುವುದಿಲ್ಲ.

—ರಾಜು ಎಂ.ಕೆ., ಬೆಂಗಳೂರು

## ಪೂರಕ

ಸ್ವಾಸ್ಥ್ಯ ಸಮಯವನ್ನು (ಏ. 17) ನಾನು ಕಣ್ತಪ್ಪಿನಿಂದ ‘ಹಾಸ್ಯ ಸಮಯ’ ಎಂದು ಓದಿಕೊಂಡೆ! ತಪ್ಪೇನು, ಸ್ವಾಸ್ಥ್ಯ ಸಮಯಕ್ಕೆ ಹಾಸ್ಯ ಸಮಯ ಪೂರಕವಷ್ಟೆ!

—ಸಿಪಿಕೆ, ಮೈಸೂರು

## ಮರವೂ ಇಲ್ಲ, ಕಾಡೂ ಇಲ್ಲ

‘ಉಂಡೆಹುಳಿ’ (ಏ. 24, ಪ. ರಾಮಕೃಷ್ಣ ಶಾಸ್ತ್ರಿ) ಲೇಖನದಲ್ಲಿ ತಿಳಿಸಿರುವ ಉಂಡೆಹುಳಿ ಆಗ ನಮ್ಮ ಮನೆ ಹತ್ತಿರವೂ ಇತ್ತು. ಅದರ ಕಾಯಿಯಿಂದ ಗೊಜ್ಜು ಮಾಡುತ್ತಿದ್ದೆವು. ಈಗ ಮರವೂ ಇಲ್ಲ, ಕಾಡೂ ಇಲ್ಲ. ನಮ್ಮಲ್ಲಿ ‘ವಾಟೆಕಾಯಿ’ ಎಂದೂ ಕರೆಯುತ್ತಾರೆ,

—ಎಸ್.ಎನ್. ಮಹಾಬಲರಾವ್,
ನರಸಿಂಹರಾಜಪುರ

## ಸ್ಫೂರ್ತಿದಾಯಕ ಸಂದರ್ಶನ

‘ಡಿಸಿ ಸಂಜನಾ; ಸಂಕಲ್ಪಕ್ಕೊಲಿದ ರ‍್ಯಾಂಕ್’ (ಏ. 24, ರಾಘವೇಂದ್ರ ಕೆ. ತೊಗರ್ಸಿ) ಸಂದರ್ಶನ ಸ್ಫೂರ್ತಿದಾಯಕವಾಗಿದೆ. ಮೂಲಸೌಕರ್ಯಗಳಿಲ್ಲದ ಹಳ್ಳಿಯ ಅಪ್ರತಿಮ ಪ್ರತಿಭಾನ್ವಿತ ಹುಡುಗಿ ಸಂಜನಾ, ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಸಾಧನೆ ಮಾಡಲು ದೃಢಸಂಕಲ್ಪ, ಛಲ ಮತ್ತು ಶಿಸ್ತುಬದ್ಧ ಓದಿನ ಕ್ರಮ ಮುಖ್ಯವೆಂಬುದನ್ನು ಸಾಬೀತುಪಡಿಸಿದ್ದಾರೆ. ಇಂದಿನ ದಿನಗಳಲ್ಲಿ ಖಾಸಗಿ ಟ್ಯೂಷನ್ ಫ್ಯಾಷನ್ ಆಗಿರುವಾಗ ಇದಾವುದೂ ಇಲ್ಲದ ಗ್ರಾಮೀಣ ಪ್ರದೇಶದ ಹುಡುಗಿಯ ಸಾಧನೆ ಇತರರಿಗೂ ಸ್ಫೂರ್ತಿ.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ಪೋಷಕರ ಪಾತ್ರವೇ ಹೆಚ್ಚು

‘ಪರೀಕ್ಷೆ: ಫೇಲಾಗುವುದು ಮಕ್ಕಳಲ್ಲ, ಶಿಕ್ಷಣ ವ್ಯವಸ್ಥೆ’ (ಏ. 24, ರಘುನಾಥ ಚ.ಹ.) ‘ನಿಮ್ಮೊಡನೆ’ಯಲ್ಲಿ ಉಲ್ಲೇಖಿಸಿರುವ ಸಮಸ್ಯೆ ಸಾರ್ವಕಾಲಿಕ.

ಶಿಕ್ಷಣದ ಮೂಲಭೂತ ಉದ್ದೇಶವೇ ಮಕ್ಕಳನ್ನು ಮಾನಸಿಕವಾಗಿ ಸಬಲಗೊಳಿಸುವುದು, ಸರಿ. ಆದರೆ ಮಕ್ಕಳು ಶಾಲೆಗಿಂತ ಮನೆಯಲ್ಲಿ ಕಳೆಯುವ ಸಮಯವೇ ಹೆಚ್ಚು. ಹೀಗಾಗಿ ಪೋಷಕರ ಭಯವೂ ಹೆಚ್ಚಿರುತ್ತದೆ. ಶಿಕ್ಷಣರಂಗದಲ್ಲಿ ನನ್ನ 38 ವರ್ಷಗಳ ಅನುಭವದಲ್ಲಿ ಹಲವು ಸಂಗತಿಗಳನ್ನು ಕಂಡಿದ್ದೇನೆ. ಒಮ್ಮೆ ಹದಿಹರೆಯದ ವಿದ್ಯಾರ್ಥಿನಿಯೊಬ್ಬಳು ನಮ್ಮಲ್ಲಿ ಪಿಯುಸಿ ಕಲಿತು ಬಳಿಕ ಇಂಗ್ಲಿಷ್ ಎಂಎ ಮಾಡಿ ಉಪನ್ಯಾಸಕಿ ಆಗುವ ಮಹದಾಸೆ ಹೊತ್ತಿದ್ದಳು. ಆದರೆ ಪೋಷಕರಿಗೆ ಅವಳು ಡಾಕ್ಟರ್, ಎಂಜಿನಿಯರ್ ಆಗಬೇಕೆಂಬ ಆಸೆ. ವಿಜ್ಞಾನ ವಿಭಾಗಕ್ಕೂ, ಹಾಸ್ಟೆಲ್‌ಗೂ ಸೇರಿಸಿ ಊರಿಗೆ ಮರಳಿದರು. ಅವಳಿಗೆ ಸೈನ್ಸ್ ಒಗ್ಗಲಿಲ್ಲ. ಅವಳು ಡೆತ್‌ನೋಟ್ ಬರೆದಿಟ್ಟದ್ದು ಅವಳ ಗೆಳತಿ ಮೂಲಕ ನನ್ನ ಕಿವಿಗೆ ಬಿದ್ದು, ಅವಳ ಹೆತ್ತವರನ್ನು ಕರೆಸಿ ವಿಷಯ ತಿಳಿಸಿದೆ, ನಯವಾಗಿ. ಮುಂದಿನ ನಡೆ ಸುಖಾಂತ್ಯ! ಮುಂದೊಮ್ಮೆ ಆಂಗ್ಲ ಭಾಷೆಯ ಉಪನ್ಯಾಸಕಿ ಆಗಿ ಆ ಹುಡುಗಿ ನನ್ನನ್ನು ಭೇಟಿಯಾದಾಗ ನನ್ನಲ್ಲಿ ಧನ್ಯತಾಭಾವ!

— ಸುಶೀಲಾ ಆರ್. ರಾವ್, ಉಡುಪಿ

## ಕಟುಸತ್ಯಗಳ ನಿರೂಪಣೆ

ಕೇಶವರೆಡ್ಡಿ ಹಂದ್ರಾಳ ಅವರು ‘ಆಸ್ಕರ್ ವೈಲ್ಡನ ನೈಟಿಂಗೇಲ್ಸ್’ ಧಾರಾವಾಹಿ ಮೂಲಕ ಓದುಗರನ್ನು ಬಂಧಿಸಿದ್ದಾರೆ.




ಏ. 24ರ ಸಂಚಿಕೆಯಲ್ಲಿನ ಕೆಲವು ಸಂಭಾಷಣೆ, ಮಾತುಗಳು ವಿಶೇಷವೆನಿಸಿದವು. ಜೀವನದ ಕಠೋರ ಸತ್ಯಗಳು ಈ ಸಂಚಿಕೆಯಲ್ಲಿ ನಿರೂಪಿತವಾಗಿವೆ. ಮೋನಪ್ಪ ಅವರು ತುಂಬಾ ನಾಜೂಕಾಗಿ ಚಿತ್ರ ಬಿಡಿಸುತ್ತಿದ್ದಾರೆ.

—ಕೆ.ಎಂ. ಮಧ್ವರಾಯ

## ಹಳತೆಂಬ ಸೊಗಸು

‘ಯುಗಾದಿ ಪ್ರಬಂಧ ಸ್ಪರ್ಧೆ 2025’ರ ತೀರ್ಪುಗಾರರು ಮೆಚ್ಚಿದ ಪ್ರಬಂಧ, ‘ದೇವರ ಮನೆ’ (ಏ. 24, ನಳಿನಿ ಟಿ. ಭೀಮಪ್ಪ) ಬಹಳ ಚೆನ್ನಾಗಿದೆ. ಹಳೆಯ ಕಾಲದ ದಿನಚರಿ, ಕೂಡುಕುಟುಂಬದ ಸೊಗಸು, ಭಾಷೆಯ ಸೊಗಡು ಹಾಗೂ ಆಗಿನ ಪ್ರತಿ ಆಗುಹೋಗು, ವಿಚಾರಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿರುವ ಭಾಷಾ ಶೈಲಿಯು ಬಹಳ ಮೆಚ್ಚುಗೆಯಾಯಿತು. ಇದೇ ರೀತಿ ನನ್ನ ನಲ್ಮೆಯ ‘ಸುಧಾ’ ಒಳ್ಳೊಳ್ಳೆಯ



ಲೇಖನಗಳನ್ನು ಹೊತ್ತು ತರುವಳೆಂದು ಆಶಿಸುತ್ತೇನೆ.

—ಪ್ರತಿಭಾ ಕುಮಾರಿ, ಮೈಸೂರು

## ಹಳ್ಳಿ ನೆನಪಾಯಿತು

ಪ್ರಬಂಧ ಹಿತವಾಗಿದೆ. ಅದರಲ್ಲಿ ಬರುವ ಪ್ರತಿ ಪಾತ್ರವೂ ನನ್ನ ಬಾಲ್ಯದ ನೆನಪು ಮಾಡಿಕೊಟ್ಟಿತು. ನಾನು ಹುಟ್ಟಿ ಬೆಳೆದಿರುವ ಹಳ್ಳಿಯನ್ನು ಜ್ಞಾಪಕ ಮಾಡಿಕೊಟ್ಟಿರಿ.

—ರಜನಿ ವಿಶ್ವನಾಥ, ಬೆಂಗಳೂರು

## ಆಪ್ಯಾಯಮಾನ

ಪ್ರಬಂಧ ಓದುತ್ತಾ ನಾನೂ ಬಾಲ್ಯಕ್ಕೆ ಜಾರಿದೆ. ಎಷ್ಟು ಚೆನ್ನಾಗಿ ಆ ದಿನಗಳಲ್ಲಿ ಬದುಕಿದ ರೀತಿಯನ್ನು ವಿವರಿಸಿದ್ದಾರೆ. ಸಾಮಾನುಗಳ ಜೋಡಣೆ ನಮ್ಮಲ್ಲೂ ಅಕ್ಷರಶಃ ಹಾಗೆಯೇ ಇತ್ತು. ಓದಲು ಬಹಳ ಆಪ್ಯಾಯಮಾನವಾಗಿತ್ತು.

—ಶ್ಯಾಮಲಾ ಎಚ್.ಎನ್., ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in